ನಾನು ಉಷಾಳನ್ನು ಪ್ರೀತಿಸ್ತೀನಿ. ಉಷಾಳನ್ನು ಪ್ರೀತಿಸ್ತೀನಿ...

ದೇವರಾಜನ ಸ್ವಗತಗಳು ಕೇಳುವವರಿಲ್ಲದ ಕಾಡಿನ ಹಕ್ಕಿಯ ಹಾಡಿನಂತೆ ವ್ಯರ್ಥವಾಗತೊಡಗಿದವು. ಹುಚ್ಚು ಹುಡುಗ ತಾಳ್ಮೆ ಕಳೆದುಕೊಂಡ. ಉಷಾ ಹೊರತು ಬದುಕಿನಲ್ಲಿ ಇನ್ನೇನೂ ಕಾಣದಷ್ಟು ಕಣ್ಣುಗಳು ಕಿರಿದಾಗಿದ್ದವು. ಉಷಾಳ ಚಿತ್ರವಲ್ಲದೆ ಬೇರೇನೂ ತುಂಬದಷ್ಟು ಮನಸ್ಸು ಚಿಕ್ಕದಾಗಿ ಹೋಗಿತ್ತು. ಮಳೆ ಹೆಚ್ಚುತ್ತಲೇ ಇತ್ತು. ದೇವರಾಜನ ನಡಿಗೆಗಳು ಮಾತ್ರ ನಿಧಾನವಾಗುತ್ತಿದ್ದವು. ತನ್ನ ಕಾಲೇಜಿನೆದುರು ನಿಂತ. ಉದ್ದನೆಯ ಫಲಕ ಕಾಣಿಸ್ತು. ಒಮ್ಮೆ ಮನಸ್ಸಿನ ತುಂಬಾ ಓದಿಕೊಂಡ. ದೀಪದ ಬೆಳಕಿನಲ್ಲಿ ದೇವ್—ಉಷಾ ಎಂಬ ದಪ್ಪ ಅಕ್ಷರಗಳೂ ನೀರಿನ ಇರಿಚಲು ಹೊಡೆತಕ್ಕೆ ಕರಗಿ ಮಸುಕಾಗಿದ್ದವು. ತಾನು ನಡೆದಾಡಿದ, ಹೊಡೆದಾಡಿದ, ಪ್ರೀತಿಸಿದ ಕಾಲೇಜನ್ನು ಒಮ್ಮೆ ಸ್ಪರ್ಶಿಸಿ ಸುಖಪಟ್ಟ.

ಮುಂದಿನ ಹೆಜ್ಜೆಗಳು ಬಿರುಸಾಗಿದ್ದವು. ಶಿರೀನ್ ಟಾಕೀಸದಲ್ಲಿ ತೇರೆ ಮೇರೆ ಸಪ್ನೆ ನಡೆಯುತ್ತಿತ್ತು. ದೇವರಾಜನಂತ ಹುಡುಗರು ಪ್ರೇಮಿಸಲು ಕಲಿಯುವುದೇ ಇಲ್ಲಿಂದ. ಸಿನಿಮಾ ಸಮಸ್ಯೆಗಳನ್ನು ತಂದುಕೊಳ್ಳುವುದು ಹೇಗೆ ಎಂಬುದನ್ನು ಹೇಳುತ್ತದೆಯೇ ಹೊರತು ಪರಿಹರಿಸಿಕೊಳ್ಳುವುದು ಹೇಗೆ ಎಂದು ಎಲ್ಲಿ ಹೇಳುತ್ತದೆ? ದೇವರಾಜ ಮುಂದೆ ನಡೆದ.

ಗೋಪಾಲ ನಾಯಕರ ಮನೆಯ ಗೇಟು ಹಾರಿದ. ಗೋಡೆಯ ಬದಿಯಲ್ಲಿ ನಿಧಾನಕ್ಕೆ ತೆವಳಿ 'ಉಷಾ ಉಷಾ' ಎಂದು ಪಿಸುಮಾತಿನಲ್ಲಿ... ಆದರೆ ಆರ್ತನಾಗಿ ಕೂಗಿದ. ಉಷಾಗೆ ಕೇಳಿಸಲಿಲ್ಲ.

ಉಷಾ ಬಳಲಿದ್ದಳು. ಕಣ್ಮುಚ್ಚಿ ಮಲಗಿದ್ದಳು. ನಾಯಕರು ಆಕೆಯ ತಲೆಯ ಬದಿಯಲ್ಲಿ ಕುಳಿತು ತಲೆ ನೇವರಿಸುತ್ತಿದ್ದರು. ಮೂರನೆಯ ಬಾರಿ ಈತ ಉಷಾ ಅಂದಾಗ ಅವರಿಗೆ ಕೇಳಿಸಿತು. ಬಾಗಿಲು ತೆರೆದರು.

ತೊಯ್ದು ತೊಪ್ಪೆಯಾಗಿ ನಿಂತಿದ್ದ ದೇವರಾಜನನ್ನು ಕಂಡು ಅಯ್ಯೋ ಅನಿಸಿತು. ತಮ್ಮ ಕಾಲೇಜು ದಿನಗಳಲ್ಲಿನ ಪ್ರೇಮದ ದಿನಗಳು ಮರುಕಳಿಸಿದವೇನೋ. ಅವರಿಗೂ ಹನಿ ಮೂಡಿತು. ದೇವರಾಜ ಬಾಗಿಲಲ್ಲೇ ನಿಂತಿದ್ದ. ಮೈನ ಬಟ್ಟೆಗಳಿಂದ ನೀರು ಧಾರೆಯಾಗಿ ತೊಟ್ಟಿಕ್ಕುತ್ತಿತ್ತು—ಅವನ ಕಣ್ಣೀರಿನ ಸಂಕೇತದಂತೆ.

ನಾಯಕರು ದೇವರಾಜನನ್ನು ಒಳಗೆ ಕರೆಯಲಿಲ್ಲ. ಇಷ್ಟು ಹೊತ್ತಿನಲ್ಲಿ ಆತನನ್ನು ಮನೆಗೆ ಸೇರಿಸುವುದು ಅವರಿಗೆ ಸರಿ ಕಾಣಲಿಲ್ಲ. ಅವನ ಮೈ ಒರೆಸಿಕೊಳ್ಳಲು ಟವೆಲ್ ಕೊಡಬೇಕೆನಿಸಿದರೂ, ಏಕೋ ಆಗದೆ ಸುಮ್ಮನೆ ನಿಂತರು. ದೇವರಾಜ ಆತಂಕದಿಂದ 'ಉಷಾಗೆ ಏನಾಗಿದೆ' ಎಂದ.

"ನೀನು ಅತ್ತ ಹೋದೆ. ಇತ್ತ ಅವಳಿಗೆ ಜ್ವರ ಬಂತು. ಮಳೆಯಲ್ಲಿ ತುಂಬಾ ನೆಂದಿರಬೇಕು. ಈಗಷ್ಟೇ ಮಲಗಿದ್ದಾಳೆ. ನಾನೇ ಗಂಜಿ ಮಾಡಿಕೊಟ್ಟೆ. ಬೆಳಿಗ್ಗೆ ಆರಾಮವಾಗ್ತಾಳೆ. ಮಾತ್ರೆ ತಿನ್ನಿಸಿದ್ದೇನೆ..."

ನಾಯಕರು ಮಾತನಾಡಿದರೇ ಹೊರತು ಮನೆಯೊಳಕ್ಕೆ ಆಹ್ವಾನಿಸಲಿಲ್ಲ.

"ದೇವ್ರೂ..."

"ಸಾರ್?"

"ಒಂದು ಮಾತು ಹೇಳ್ತೀನಿ, ಕೋಪ ಇಲ್ಲ ತಾನೇ?"

"ಹೇಳಿ, ಕೋಪ ಇಲ್ಲ."

"ನೀನು ತುಂಬಾ ಮುಂಗೋಪಿ. ವಿಷ್ಣು ನಾಯಕನಿಗೆ ಹೊಡೆದೆಯಂತೆ. ಅದಕ್ಕೇ..."